## ನನ್ನ ಕಥಾಪ್ರಸಂಗ

ನಾನು ಕತೆಗಾರ; ಕಾದಂಬರಿಕಾರನಾದದ್ದು ಆಕಸ್ಮಿಕ. 'ಉಮಾ ವಾದ್ಯಗೋಷ್ಠಿ' ಎಂಬ ಆರ್ಕೆಸ್ಟ್ರಾ ಮಾಡಿಕೊಂಡು ಹಾರ್ಮೋನಿಯಂ, ಕೊಳಲು, ಮೌತ್ ಆರ್ಗನ್ ನುಡಿಸುತ್ತಾ ಕಿಶೋರ್‌ಕುಮಾರನಂತೆ ಹಾಡುತ್ತಾ ಗೆಳೆಯರೊಂದಿಗೆ ನಾಡಿನಾದ್ಯಂತ, ಬಡತನ ನೀಗಿಸಲು ಕಾರ್ಯಕ್ರಮ ಕೊಡುತ್ತಾ ನಾಲ್ಕು ಕಾಸು ಸಂಪಾದಿಸುತ್ತಿದ್ದ ಕಾಲವದು. ಅದರ ನಡುವೆಯೇ ಕೆಪಿಎಸ್‌ಸಿ ಪರೀಕ್ಷೆ ಬರೆದಿದ್ದೆ. ದಿಢೀರ್ ಅಂತ ಮರುವರ್ಷವೇ(1971) ದ್ವಿತೀಯ ದರ್ಜೆ ಗುಮಾಸ್ತನ ಕೆಲಸಕ್ಕೆ ಆದೇಶ ಬಂದಿದ್ದು, ಸ್ಥಳ ಗುಲ್ಬರ್ಗ ಜಿಲ್ಲಾ ಆಸ್ಪತ್ರೆ ಎಂದಿತ್ತು! ಕೆಲಸ ಸಿಕ್ಕ ಆನಂದವನ್ನು ನುಚ್ಚುನೂರು ಮಾಡಿದ್ದು ದೂರದ ಊರು ಗುಲ್ಬರ್ಗ. ಭಾಷೆ, ಬದುಕು, ಊಟ ಎಲ್ಲಾ ಬೇರೆ ಎಂಬ ಭಯ. ಸಿಕ್ಕ ಸರ್ಕಾರಿ ನೌಕರಿ ಬಿಟ್ಟರೆ ಬಸ್‌ಸ್ಟ್ಯಾಂಡ್‌ನಲ್ಲಿ ಕೂಲಿ ಕೆಲಸ ಮಾಡಲು ಅರ್ಹನಾಗಿದ್ದೆ. ದುಡ್ಡು, ಶಿಫಾರಸು ಇಲ್ಲದೆ ದೊರಕಿದ ಕೆಲಸವನ್ನು ಬಿಡುವುದೆಂತು? ನಾನು ಚಲನಚಿತ್ರ ಪ್ಲೇಬ್ಯಾಕ್ ಸಿಂಗರ್ ಇಲ್ಲವೆ ಮ್ಯೂಸಿಕ್ ಡೈರೆಕ್ಟರ್ ಆಗುವ ಕನಸು ಹೊತ್ತವನು. ಆರ್ಕೆಸ್ಟ್ರಾ ಮಾಡಿದ ಎರಡು ಮೂರು ವರ್ಷಗಳಲ್ಲೇ ನನ್ನ ಕನಸು ನನಸಾಗದೆಂಬ ಅರಿವಾಗಿದ್ದು ಸುದೈವವಿರಬೇಕು. ನಾವು ಸಿನಿಮಾ ಹಾಡುಗಳನ್ನು 'ಕಾಪಿ' ಮಾಡುವವರೇ ವಿನಹ ನಮ್ಮ ಸೃಜನಶೀಲತೆ ಏನೂ ಇಲ್ಲವೆಂಬ ಸತ್ಯ ಗೋಚರವಾಗಿತ್ತು. ಪ್ರಿಯವಾದ ಚಿತ್ರದುರ್ಗದ ಕೋಟೆಕೊತ್ತಲ, ಗೋಪಾಲಸ್ವಾಮಿ ಹೊಂಡ, ಗೆಳೆಯ, ಗೆಳತಿಯರು, ಮನೆಯವರನ್ನೂ ಅಗಲಬೇಕಿತ್ತು. ಅಗಲಿದೆ. ಗುಲ್ಬರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ನೌಕರನಾದೆ. ಆಗ ನನಗೆ ಬರುತ್ತಿದ್ದದ್ದು ರೂ.150 ಸಂಬಳ. ಅದರಲ್ಲಿ ನಾನು ಎಪ್ಪತ್ತು ರೂ. ಇಟ್ಟುಕೊಂಡು ಎಂಬತ್ತು ರೂಪಾಯಿಯನ್ನು ಮನೆಗೆ ಕಳಿಸಬೇಕಿತ್ತು. ಅವರದ್ದೂ ನನ್ನದ್ದೂ ಅರೆಹೊಟ್ಟೆಯೆ – ಮನೆಯಲ್ಲಿ ತಂದೆತಾಯಿ, ತಮ್ಮತಂಗಿ. ಕಚೇರಿ ಮುಗಿದ ಮೇಲೆ ಏನು ಮಾಡಬೇಕೆಂಬುದೇ ತಿಳಿಯದೆ ಒಂಟಿಯಾಗಿ ಕುಳಿತು ಅಳುತ್ತಿದ್ದೆ. ಕೊಳಲು ಮಾತ್ರ ಜೊತೆಗಿತ್ತು. ನನಗೆ ಕೊಟ್ಟ ಕ್ವಾರ್ಟರ್ಸ್‌ನಲ್ಲಿ ಬೇಸರವಾದಾಗ ನುಡಿಸುತ್ತಿದ್ದೆ, ಹಾಡುತ್ತಿದ್ದೆ. ಹೀಗಾಗಿ ಇದನ್ನು ಕೇಳಿದ ಕಚೇರಿಯ ಮಿತ್ರರು ಬೆರಗಾದರು. ಇಲ್ಲೂ ಸ್ನೇಹಬಳಗ ದೊಡ್ಡದಾಯಿತು. ಕೊಳಲು ಕೇಳಲೋ, ಕಿಶೋರ್‌ಕುಮಾರನ ಹಾಡು ಕೇಳಲೋ ಮನೆಗೆ ಕರೆವವರು ಊಟಕ್ಕಿಡದೆ ಕಳಿಸುತ್ತಿರಲಿಲ್ಲ. ಕಚೇರಿಯಲ್ಲಿದ್ದ 26 ಮಂದಿ ಸಿಬ್ಬಂದಿಗಳಲ್ಲಿ ನನ್ನನ್ನೂ ಸೇರಿ ಮೂವರು ಹಿಂದುಗಳು. ಉಳಿದವರೆಲ್ಲಾ ಮುಸ್ಲಿಂ ಬಂಧುಗಳು. ಅವರೂ ಸಂಗೀತ ಪ್ರಿಯರು. ಹಾಗಾಗಿ ದಾವತ್‌ಗೆ ಕರೆಯುತ್ತಿದ್ದುದುಂಟು. ಜಾತಿಮತ ಧರ್ಮದ ಬಗ್ಗೆ ಮೊದಲಿನಿಂದಲೂ ತಿರಸ್ಕಾರ ಬೆಳಸಿಕೊಂಡಿದ್ದ ನನಗೆ ಬೇಕಿದ್ದದು ಹಸಿವಾದಾಗ ಊಟವಷ್ಟೇ; ಜಾತಿಯಲ್ಲ. ಹೀಗಾಗಿ ನಾನು 'ಮೆಸ್'ನಲ್ಲಿ ಕೊಂಡ ಊಟದ ಟಿಕೆಟ್‌ಗಳು ಉಳಿಯುತ್ತಿದ್ದವು. ಇಷ್ಟಾದರೂ ಹೊತ್ತು ಕಳೆಯುವುದು ಸುಲಭವಾಗಿರಲಿಲ್ಲ. ಅಪಾರ ಬಡತನ, ಭಗ್ನಪ್ರೇಮ, ಜಾತಿಯಿಂದಾದ ಅಪಮಾನಗಳ ಅನುಭವವಿದ್ದ ನಾನು ಅದನ್ನೇ ಕತೆಯಾಗಿಸಿ ಬರೆಯಹತ್ತಿದೆ. ವಾದ್ಯ ನುಡಿಸಿದಷ್ಟು, ಹಾಡಿದಷ್ಟು ಸುಲಭವಲ್ಲ ಬರವಣಿಗೆ. ಬರೆದು ಪತ್ರಿಕೆಗಳಿಗೆ ಕಳುಹಿಸಿದ ಕತೆಗಳು ಗೋಡೆಗೆ ಹೊಡೆದ ಚೆಂಡಿನಂತೆ 'ರೀಬೌಂಡ್' ಆಗಿ ನನಗೇ ಮರಳಹತ್ತಿದಾಗ ಛಲಬಿಡದ ತ್ರಿವಿಕ್ರಮನಂತೆ ಮರಳಿಯತ್ನವ ಮಾಡುತ್ತಲೇ ಹೋದೆ. ಸಾಹಿತ್ಯದ ವಿದ್ಯಾರ್ಥಿಯಲ್ಲದ, ಅಕಡೆಮಿಕ್ ಹಿನ್ನೆಲೆ ಇರದ, ಇತರರ ಸಾಹಿತ್ಯವನ್ನು ನೆಟ್ಟಗೆ ಓದಿಕೊಳ್ಳದ, ಅನುಭವವನ್ನೇ ನೆಚ್ಚಿಕೊಂಡು ಬರೆದು ಬರೆದು ಕೈಪಳಗಿಸಿಕೊಂಡೆ. ವರ್ಗವಾಗಿ ದಾವಣಗೆರೆಗೆ